| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 56 ]
Total No. of Questions : 56 ]

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 16
[ Total No. of Printed Pages : 16

**ಸಂಕೇತ ಸಂಖ್ಯೆ : 93-K** **ವಿಷಯ : ಭಾರತೀಯ ರಾಜ್ಯಶಾಸ್ತ್ರ ಮತ್ತು ಪೌರನೀತಿ**

**Code No. : 93-K** **Subject : INDIAN POLITICS & CIVICS**

( ಕನ್ನಡ ಭಾಷಾಂತರ / Kannada Version )

ದಿನಾಂಕ : 19. 06. 2013 ] [ Date : 19. 06. 2013

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಪರಮಾವಧಿ ಅಂಕಗಳು : 100 ] [ Max. Marks : 100

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 13. | | 25. | | 37. | | 49. | |
| 2. | | 14. | | 26. | | 38. | | 50. | |
| 3. | | 15. | | 27. | | 39. | | 51. | |
| 4. | | 16. | | 28. | | 40. | | 52. | |
| 5. | | 17. | | 29. | | 41. | | 53. | |
| 6. | | 18. | | 30. | | 42. | | 54. | |
| 7. | | 19. | | 31. | | 43. | | 55. | |
| 8. | | 20. | | 32. | | 44. | | 56. | |
| 9. | | 21. | | 33. | | 45. | | × | |
| 10. | | 22. | | 34. | | 46. | | × | |
| 11. | | 23. | | 35. | | 47. | | × | |
| 12. | | 24. | | 36. | | 48. | | × | |
| | | | | | | | | ***Total Marks*** | |

| **Total Marks in words** | | **Grand Total** | |
|---|---|---|---|

| | | | |
|---|---|---|---|
| 1. ✓ | | ✓ | ✓ |
| 2. ✓ | | | |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

[ Turn over

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 56 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

1. ಸಮ್ಮಿಶ್ರ ಸರ್ಕಾರವನ್ನು ಈ ಸಂದರ್ಭದಲ್ಲಿ ರಚಿಸಬಹುದಾಗಿದೆ

(A) ಎರಡು ಅಥವಾ ಹೆಚ್ಚು ಪಕ್ಷಗಳು ಚುನಾವಣೆಗಿಂತ ಮುಂಚೆ ಜೊತೆಯಾದಾಗ

(B) ಯಾವುದೇ ರಾಜಕೀಯ ಪಕ್ಷವು ಚುನಾವಣೆಯಲ್ಲಿ ಬಹುಮತ ಪಡೆಯದಿದ್ದಾಗ

(C) ಆಳುವ ಮುಖ್ಯಮಂತ್ರಿಯವರು ರಾಜಿನಾಮೆ ನೀಡಿದಾಗ

(D) ಒಂದು ರಾಜ್ಯದ ಮುಖ್ಯಮಂತ್ರಿ ಮರಣ ಹೊಂದಿದಾಗ

*ಉತ್ತರ :* ______________________

2. ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಲು ಬೇಕಾಗಿರುವ ಒಂದು ಅರ್ಹತೆ

(A) ಕನಿಷ್ಠ ಹತ್ತು ವರ್ಷಗಳ ಕಾಲ ಕೆಳ ನ್ಯಾಯಾಲಯದ ನ್ಯಾಯಾಧೀಶರಾಗಿ ಕೆಲಸ ಮಾಡಿರಬೇಕು

(B) ಕನಿಷ್ಠ ಹತ್ತು ವರ್ಷಗಳ ಕಾಲ ಕೆಳ ನ್ಯಾಯಾಲಯದ ನ್ಯಾಯವಾದಿಯಾಗಿ ಕೆಲಸ ಮಾಡಿರಬೇಕು

(C) ಕನಿಷ್ಠ ಐದು ವರ್ಷಗಳ ಕಾಲ ಕೆಳ ನ್ಯಾಯಾಲಯದ ನ್ಯಾಯವಾದಿಯಾಗಿ ಕೆಲಸ ಮಾಡಿರಬೇಕು

(D) ಐದು ವರ್ಷಗಳ ಕಾಲ ಉಚ್ಚ ನ್ಯಾಯಾಲಯದ ನ್ಯಾಯವಾದಿಯಾಗಿ ಕೆಲಸ ಮಾಡಿರಬೇಕು

*ಉತ್ತರ :* ______________________

3. ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ನಿವೃತ್ತಿ ವಯಸ್ಸು

(A) 62 ವರ್ಷಗಳು (B) 58 ವರ್ಷಗಳು

(C) 56 ವರ್ಷಗಳು (D) 60 ವರ್ಷಗಳು

*ಉತ್ತರ :* ______________________________

4. ಜನತೆಯು ಉಚ್ಚ ನ್ಯಾಯಾಲಯದ ತೀರ್ಪಿನಿಂದ ಸಂತೃಪ್ತಗೊಳ್ಳದಿದ್ದರೆ ಅವರು ಈ ನ್ಯಾಯಾಲಯಕ್ಕೆ ಅಪೀಲು ಹೋಗಬಹುದು

(A) ಜಿಲ್ಲಾ ಸಿವಿಲ್ ನ್ಯಾಯಾಲಯ (B) ಜಿಲ್ಲಾ ಸೆಶೆನ್ಸ್ ನ್ಯಾಯಾಲಯ

(C) ಮುನ್ಸಿಫ್ ನ್ಯಾಯಾಲಯ (D) ಸರ್ವೋಚ್ಚ ನ್ಯಾಯಾಲಯ

*ಉತ್ತರ :* ______________________________

5. ಕೆಳ ನ್ಯಾಯಾಲಯದ ನ್ಯಾಯಾಧೀಶರ ನೇಮಕ ಮಾಡುವಾಗ ರಾಜ್ಯಪಾಲರು ಇವರಿಂದ ಸಲಹೆ ಪಡೆಯುತ್ತಾರೆ

(A) ಉಚ್ಚ ನ್ಯಾಯಾಲಯ (B) ಸರ್ವೋಚ್ಚ ನ್ಯಾಯಾಲಯ

(C) ಭಾರತದ ರಾಷ್ಟ್ರಪತಿ (D) ಮುಖ್ಯಮಂತ್ರಿ

*ಉತ್ತರ :* ______________________________

6. ನ್ಯಾಯಾಲಯದ ಸಿಬ್ಬಂದಿಗಳ ನೇಮಕಾತಿಯಲ್ಲಿ ರಾಜ್ಯಪಾಲರಿಗೆ ಸಹಾಯ ಮಾಡುವ ಆಯೋಗ

(A) ಸರ್ಕಾರಿ ಸೇವಾ ಆಯೋಗ (B) ಲೋಕಸೇವಾ ಆಯೋಗ

(C) ಜನತಾಸೇವಾ ಆಯೋಗ (D) ನ್ಯಾಯಾಲಯ ಸೇವಾ ಆಯೋಗ

*ಉತ್ತರ :* ______________________________

7. ಒಂದು ರಾಜ್ಯದ ಉದ್ಯೋಗಿಗಳ ಸೇವಾ ನಿಯಮಗಳನ್ನು ರಚಿಸುವ ಕಾರ್ಯ ಇದರದ್ದು

(A) ರಾಜ್ಯ ಸರ್ಕಾರ (B) ಕೇಂದ್ರ ಸರ್ಕಾರ

(C) ಉಚ್ಚ ನ್ಯಾಯಾಲಯ (D) ಲೋಕಸೇವಾ ಆಯೋಗ

*ಉತ್ತರ :* ______________________________

8. ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರ ಅಧಿಕಾರಾವಧಿ

(A) 6 ವರ್ಷಗಳು (B) 5 ವರ್ಷಗಳು

(C) 3 ವರ್ಷಗಳು (D) 4 ವರ್ಷಗಳು

*ಉತ್ತರ :* ______________________________

9. ಸಭೆ ಮತ್ತು ಸಮಿತಿಗಳು ಆರಂಭವಾಗಿದ್ದು ಇವರ ಕಾಲದಲ್ಲಿ

(A) ಆರ್ಯರ (B) ಮೌರ್ಯರ

(C) ಚೋಳರ (D) ಇಂಗ್ಲಿಷರ

*ಉತ್ತರ :* ______________________________

10. ದೊಡ್ಡ ನಗರಗಳಲ್ಲಿ ಕಂಡುಬರುವ ಸ್ಥಳೀಯ ಸರ್ಕಾರ

(A) ಪುರಸಭೆ (B) ನಗರ ಸಭೆ

(C) ಮಹಾನಗರ ಪಾಲಿಕೆ (D) ಜಿಲ್ಲಾ ಪಂಚಾಯಿತಿ

*ಉತ್ತರ :* __________

11. ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಲು ಬೇಕಾಗಿರುವ ಕನಿಷ್ಠ ವಯಸ್ಸು

(A) 30 ವರ್ಷಗಳು (B) 25 ವರ್ಷಗಳು

(C) 21 ವರ್ಷಗಳು (D) 35 ವರ್ಷಗಳು

*ಉತ್ತರ :* __________

12. ನಗರ ಸಭೆಯ ಆಡಳಿತದಲ್ಲಿ ಸಹಾಯ ಮಾಡಲು ಒಬ್ಬ ಮುಖ್ಯಾಧಿಕಾರಿಯನ್ನು ನೇಮಕ ಮಾಡುವ ಅಧಿಕಾರವಿರುವುದು

(A) ರಾಜ್ಯ ಸರ್ಕಾರ (B) ನಗರ ಸಭೆಯ ಅಧ್ಯಕ್ಷರು

(C) ನಗರ ಸಭೆಯ ಉಪಾಧ್ಯಕ್ಷರು (D) ಚುನಾವಣಾ ಆಯೋಗ

*ಉತ್ತರ :* __________

13. ನಗರ ಸಭೆಯ ಕಾರ್ಯಕಲಾಪಗಳನ್ನು ನಡೆಸಲು ಬೇಕಾಗಿರುವ ಸದಸ್ಯರ ಸಂಖ್ಯೆ

(A) ಸಭೆಯ ಒಟ್ಟು ಸದಸ್ಯರ ಆರನೆಯ ಒಂದು ಭಾಗ

(B) ಸಭೆಯ ಒಟ್ಟು ಸದಸ್ಯರ ಮೂರನೆಯ ಒಂದು ಭಾಗ

(C) ಸಭೆಯ ಒಟ್ಟು ಸದಸ್ಯರ ನಾಲ್ಕನೆಯ ಒಂದು ಭಾಗ

(D) ಸಭೆಯ ಒಟ್ಟು ಸದಸ್ಯರ ಐದನೆಯ ಒಂದು ಭಾಗ

*ಉತ್ತರ :* __________

14. ವಿಶ್ವ ಸಂಸ್ಥೆಯು ಸ್ಥಾಪನೆಯಾದ ವರ್ಷ

(A) ಕ್ರಿ.ಶ. 1950 (B) ಕ್ರಿ.ಶ. 1945

(C) ಕ್ರಿ.ಶ. 1944 (D) ಕ್ರಿ.ಶ. 1956

*ಉತ್ತರ :* __________

15. ಭಾರತವು ಸ್ವಾತಂತ್ರ್ಯವನ್ನು ಗಳಿಸಲು ಅನುಸರಿಸಿದ ವಿಧಾನ

(A) ಹಿಂಸಾ ವಿಧಾನ (B) ಕ್ರಾಂತಿ ವಿಧಾನ

(C) ಅಹಿಂಸಾ ವಿಧಾನ (D) ಯುದ್ಧ ವಿಧಾನ

*ಉತ್ತರ :* __________

II. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

16. ರಾಜ್ಯ ಕಾರ್ಯಾಂಗದ ಮುಖ್ಯಸ್ಥರು ..........................................................................

17. ವಿಧಾನ ಪರಿಷತ್ ಹಣಕಾಸಿನ ಮಸೂದೆಯನ್ನು ..........................................................................
ದಿನಗಳೊಳಗೆ ಹಿಂದಕ್ಕೆ ಕಳುಹಿಸಬೇಕು.

18. ಆಧುನಿಕ ಪ್ರಜಾಪ್ರಭುತ್ವವು ............................................................... ಪ್ರಜಾಪ್ರಭುತ್ವವಾಗಿದೆ.

19. ಬಂಧಿತನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ಹೊರಡಿಸುವ ಲೇಖ ...............................

20. ಪಂಚಾಯಿತಿ ರಾಜ್‌ನ ಬೆನ್ನೆಲುಬು .................................................................... ಆಗಿದೆ.

III. 21. ಈ ಕೆಳಗೆ ಕೊಟ್ಟಿರುವ **A** ಪಟ್ಟಿಯಲ್ಲಿನ ಪದಗಳನ್ನು **B** ಪಟ್ಟಿಯಲ್ಲಿನ ಪದಗಳೊಡನೆ ಹೊಂದಿಸಿ ಕೆಳಗೆ ಕೊಟ್ಟಿರುವ ಜಾಗದಲ್ಲಿ ಬರೆಯಿರಿ : 5 × 1 = 5

| ***A* ಪಟ್ಟಿ** | | ***B* ಪಟ್ಟಿ** | |
|---|---|---|---|
| a) | ರಾಜ್ಯಪಾಲರು ಮತ್ತು ಮಂತ್ರಿಮಂಡಲದ ನಡುವಿನ ಸೇತುವೆ | i) | ಲೋಕಸಭೆ |
| b) | ರಾಜ್ಯದ ಪ್ರಥಮ ಸದನ | ii) | ಮುಖ್ಯಮಂತ್ರಿ |
| c) | ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇಮಕ | iii) | ವಿಧಾನಸಭೆ |
| d) | ಮುನ್ಸೀಫ್ ನ್ಯಾಯಾಲಯ | iv) | ಭಾರತದ ರಾಷ್ಟ್ರಪತಿ |
| e) | ಭಾರತೀಯ ವಿದೇಶಾಂಗ ನೀತಿ | v) | ಜಿಲ್ಲೆಯ ಕೆಳಹಂತ ನ್ಯಾಯಾಲಯ |
| | | vi) | ಅಲಿಪ್ತ ನೀತಿ |
| | | vii) | ಪಂಚಶೀಲ |
| | | viii) | ರಾಜ್ಯಪಾಲರು |

*ಉತ್ತರಗಳು :* a) ______________________

b) ______________________

c) ______________________

d) ______________________

e) ______________________

[ Turn over

IV. ಈ ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರ ಬರೆಯಿರಿ : 9 × 1 = 9

22. ಇಂದಿನ ಭಾರತದಲ್ಲಿ ಎಷ್ಟು ರಾಜ್ಯಗಳಿವೆ ?

23. ರಾಜ್ಯದ ಮುಖ್ಯಮಂತ್ರಿಯನ್ನು ಯಾರು ನೇಮಕ ಮಾಡುತ್ತಾರೆ ?

24. ರಾಜ್ಯದ ರಾಜ್ಯಪಾಲರನ್ನು ಯಾರು ನೇಮಕ ಮಾಡುತ್ತಾರೆ ?

25. ಕಾರ್ಯಾಂಗದ ಮೇಲೆ ಸಂಪೂರ್ಣ ನಿಯಂತ್ರಣ ಯಾರಿಗಿದೆ ?

26. ದ್ವಿಸದನ ಪದ್ಧತಿ ಎಂದರೇನು ?

27. ರಾಜ್ಯಮಟ್ಟದಲ್ಲಿರುವ ಉನ್ನತ ನ್ಯಾಯಾಲಯ ಯಾವುದು ?

28. ಜಿಲ್ಲಾಮಟ್ಟದಲ್ಲಿ ಕ್ರಿಮಿನಲ್ ಮೊಕದ್ದಮೆಗಳ ವಿಚಾರಣೆ ಮಾಡುವ ನ್ಯಾಯಾಲಯವನ್ನು ಹೆಸರಿಸಿ.

29. ರಾಷ್ಟ್ರದ ಪ್ರಗತಿಯು ಗ್ರಾಮಗಳ ಅಭಿವೃದ್ಧಿಯನ್ನು ಅವಲಂಬಿಸಿದೆ. ಈ ಹೇಳಿಕೆಯನ್ನು ಯಾರು ನೀಡಿದ್ದಾರೆ ?

30. ಮೇಯರ್ ಅಧಿಕಾರಾವಧಿಯೇನು ?

V. ಈ ಕೆಳಗಿನ ಪ್ರಶ್ನೆಗಳಿಗೆ **ಎರಡು** ಅಥವಾ **ಮೂರು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : 16 × 2 = 32

31. ರಾಜ್ಯ ಸರ್ಕಾರದಲ್ಲಿ ಎಷ್ಟು ಅಂಗಗಳಿವೆ ? ಅವುಗಳನ್ನು ಹೆಸರಿಸಿ.

32. ನ್ಯಾಯಾಂಗದ ಪ್ರಾಮುಖ್ಯತೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

33. ರಾಜ್ಯದ ರಾಜ್ಯಪಾಲರ ಪ್ರಮುಖ ಕಾರ್ಯಗಳೇನು ?

34. ರಾಜ್ಯಪಾಲರು ಯಾವ ವಿಶೇಷ ಸಂದರ್ಭದಲ್ಲಿ ಸಂಪೂರ್ಣ ಮಂತ್ರಿಮಂಡಲವನ್ನು ವಜಾ ಮಾಡಬಹುದು ?

35. ರಾಜ್ಯ ಶಾಸಕಾಂಗದ ಯಾವುದಾದರೂ ಎರಡು ಕಾರ್ಯಾಂಗೀಯ ಅಧಿಕಾರಗಳನ್ನು ನಮೂದಿಸಿ.

36. ರಾಜ್ಯದ ಮೇಲ್ಮನೆಯಿಂದಾಗುವ ಅನಾನುಕೂಲಗಳೇನು ?

37. ರಾಜಕೀಯ ಪಕ್ಷಗಳು ಪ್ರಜೆಗಳಿಗೆ ಹೇಗೆ ಸಹಾಯಕವಾಗಿವೆ ?

38. ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಲು ಬೇಕಾಗಿರುವ ಅರ್ಹತೆಗಳೇನು ?

39. ನಿಷೇಧ ಲೇಖ ಎಂದರೇನು ?

40. ಜಿಲ್ಲಾ ನ್ಯಾಯಾಧೀಶರ ನೇಮಕವನ್ನು ಹೇಗೆ ಮಾಡುತ್ತಾರೆ ?

41. ಉಚ್ಚ ನ್ಯಾಯಾಲಯಕ್ಕೆ ತನ್ನ ಸಿಬ್ಬಂದಿಯ ನೇಮಕಾತಿ ಮಾಡುವಾಗ ಇರುವ ಅಧಿಕಾರಗಳೇನು ?

42. ಅಧೀನ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳು ಯಾವ ರೀತಿಯ ಸಂಬಂಧವನ್ನು ಹೊಂದಿವೆ ?

43. ಭಾರತದಲ್ಲಿ ಲೋಕಸೇವಾ ಆಯೋಗವನ್ನು ಹೇಗೆ ಸಂಘಟಿಸಲಾಗಿದೆ ?

44. ಸ್ಥಳೀಯ ಸರ್ಕಾರಗಳಲ್ಲಿ ಎಷ್ಟು ವಿಧಗಳಿವೆ ? ಅವುಗಳನ್ನು ಹೆಸರಿಸಿ.

45. ನಗರ ಸಭೆಯ ಕಾರ್ಯಗಳನ್ನು ಹೇಗೆ ವರ್ಗೀಕರಿಸಬಹುದು ?

46. ವಿಶ್ವ ಸಂಸ್ಥೆಯನ್ನು ಏಕೆ ಸ್ಥಾಪಿಸಲಾಗಿದೆ ?

VI. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ : $6 \times 3 = 18$

47. ರಾಜ್ಯಪಾಲರ ವಿವೇಚನಾಧಿಕಾರಗಳು ಯಾವುವು ?

48. ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಸ್ವಾತಂತ್ರ್ಯವನ್ನು ಹೇಗೆ ರಕ್ಷಿಸಲಾಗಿದೆ ?

49. ಉಚ್ಚ ನ್ಯಾಯಾಲಯ ಕೊಡಬಹುದಾದ ಲೇಖಗಳನ್ನು ತಿಳಿಸಿ.

50. ರಾಜ್ಯ ಲೋಕಸೇವಾ ಆಯೋಗವು ಸರ್ಕಾರದ ಆಡಳಿತದಲ್ಲಿ ಹೇಗೆ ಸಹಾಯ ಮಾಡುತ್ತದೆ ?

51. ಒಬ್ಬ ವ್ಯಕ್ತಿಯು ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ನಿಲ್ಲಬಯಸಿದ್ದಾನೆ, ಅವನಿಗೆ ಬೇಕಾಗಿರುವ ಅರ್ಹತೆಗಳೇನು ?

52. ಭಾರತದ ವಿದೇಶಾಂಗ ನೀತಿಯ ಮೂಲತತ್ವಗಳಾವುವು ?

VII. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ : $4 \times 4 = 16$

53. ಮುಖ್ಯಮಂತ್ರಿಯವರ ಅಧಿಕಾರಗಳನ್ನು ಪಟ್ಟಿಮಾಡಿ.

54. ವಿಧಾನ ಸಭೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಇರಬೇಕಾದ ಅರ್ಹತೆಗಳಾವುವು ?

[ Turn over

55. ಗ್ರಾಮ ಪಂಚಾಯಿತಿಗಳ ಕಾರ್ಯಗಳನ್ನು ವಿವರಿಸಿ.

56. ಮಹಾನಗರ ಪಾಲಿಕೆಯ ಹಣಕಾಸಿನ ಮೂಲಗಳಾವುವು ?